
# **ನಿಮಗೊಂದು ಉಚಿತ ಬ್ಲಾಗ್ ಮತ್ತು ವೆಬ್ ಸೈಟ್ ಬೇಕೆ?....ಹೀಗೆ ಮಾಡಿ:**

## **ಮೊದಲಿಗೆ ಬ್ಲಾಗ್:**


ಬ್ಲಾಗ್ ಎಂದರೆ ವೆಬ್-ಲಾಗ್....ಅಂತರ್ಜಾಲದ ಬರಹಗಳ ಡೈರಿ. ಇದರಲ್ಲಿ ನಿಮ್ಮಿಷ್ಟವಾದ ಲೇಖನ, ಕಥೆ, ಕವನಗಳನ್ನು ನಾವು ಬರೆದಿದಬಹುದಾದ ಸಂಗ್ರಹ. ಇದನ್ನು ನೀವು ನಿಮ್ಮ ಸ್ನೇಹಿತರಿಗೂ ಅಥವಾ ಎಲ್ಲರಿಗೂ ತೋರಿಸಬಹುದು. ಅದು ನಿಮ್ಮ ಆಯ್ಕೆ.


ಈಗೀಗ ಪ್ರತಿ ಗೂಗಲ್ ಖಾತೆಯ ಜತೆಗೂ ಒಂದು ಬ್ಲಾಗ್ ಉಚಿತ ಕೊಟ್ಟಿದ್ದಾರೆ. ಹಲವು ಗೂಗಲ್ ಖಾತೆಯಿದ್ದರೆ ಅಷ್ಟೇ ಬ್ಲಾಗುಗಳು ಉಚಿತ!! ಕೆಲವು ವಿಷಯಗಳಿಗೆ ಬೇರೆ ಬೇರೆ ಬ್ಲಾಗ್ ಇತ್ಯಾದಿ ಮಾಡಿಕೊಳ್ಳಬಹುದು....

1. ನಿಮ್ಮ ಗೂಗಲ್ ಖಾತೆಯೊಂದಿಗೆ ( accounts.google.com) ನಲ್ಲಿ ಜಿ-ಮೇಲ್ ನಿಂದ ಲಾಗಿನ್ ಆಗಿ.
2. Blogger.com ಎಂಬಲ್ಲಿಗೆ ಬನ್ನಿ. ಇಲ್ಲಿ Create new blog ಎಂಬಲ್ಲಿ ಹೋಗಿ ಹೊಸ ಬ್ಲಾಗ್ ಆರಂಭಿಸಿ...





3. ಬ್ಲಾಗ್ ಹೆಸರು- Title ತುಂಬಿಸಿ. ಕನ್ನಡ ಯೂನಿಕೋಡ್ ಬರೆಯಬಹುದು
4. Address ಎಂಬಲ್ಲಿ ನಿಮ್ಮ ಬ್ಲಾಗ್ ಹೆಸರು ತುಂಬಿಸಿ...ನಾನು ಉದಾ. nimmablaag ಎಂದಿದ್ದೇನೆ.( ಇಂಗ್ಲೀಷ್ ಮಾತ್ರ!). ಅದು ಇದ್ದರೆ ಮಾತ್ರ ನೀವು ಮುಂದುವರೆಯಬಹುದು. ಬೇರೆಯವರು ಆ ಹೆಸರು ಇಟ್ಟಿದ್ದರೆ ನೀವೂ ಬೇರೆ ಹೆಸರೇ ಇಡಬೇಕು.
5. ನಿಮಗಿಷ್ಟವಾದ ಯಾವುದಾದರೂ ಡಿಸೈನ್ ಥೀಂ ಆರಿಸಿ, ಆಮೇಲೆ ಅದನ್ನು ಬದಲಿಸಲೂ ಬಹುದು.
6. ಆಮೇಲೆ create blog ಒತ್ತಿ. ಅಷ್ಟೇ ನಿಮ್ಮ ಬ್ಲಾಗ್ ಸಿದ್ಧವಾಗಿದೆ.
7. ಅಲ್ಲಿ NEW POST ಒತ್ತಿ




8. ಇನ್ನು ಶೀರ್ಷಿಕೆಯಿಟ್ಟು ಸುಸ್ವಾಗತ ಎಂದೋ ಏನಾದರೂ ಬರೆದು publish ಒತ್ತಿ
9. ಈ ರೀತಿ ನಿಮ್ಮ ಮೊದಲ ಬ್ಲಾಗ್ ಪೋಸ್ಟ್ ಕಾಣುತ್ತದೆ.




10. ಈ ಬ್ಲಾಗಿನ ವಿಳಾಸ- ಮೊದಲ ಬಾಗ ಮಾತ್ರ: http://nimmablaag.blogspot.in ( ಅಥವಾ ಏನಿದೆಯೋ ಅಡ್ರೆಸ್ ಬಾರಿನಲ್ಲಿ ಅದು!).ಹೆಚ್ಚಿನ ಪೋಸ್ಟ್ಸ್ ಇದ್ದರೆ ಮುಖಪುಟಕ್ಕೆ ಹೋಗುತ್ತದೆ
11. ಆ ಪೋಸ್ಟ್ ಒಂದರ ವಿಳಾಸ ಅಲ್ಲೇ ಇದೆ: http://nimmablaag.blogspot.in/2018/05/blog-post.html. ಅದು ಅಲ್ಲಿಗೇ ನೇರವಾಗಿ ಹೋಗುತ್ತದೆ.
12. ಈ ಬ್ಲಾಗಿನಲ್ಲಿ ನೀವು ಚಿತ್ರ, ವಿಡಿಯೋ ಇತ್ಯಾದಿ ಹಾಕಿ ಸಿಂಗರಿಸಬಹುದು.. ಇಲ್ಲಿ ಅದರ ಆಯ್ಕೆಗಳು ಇವೆ:




13. Save ಮಾಡಿ ಪ್ರಿವ್ಯೂ ಮಾಡಿ ಪಬ್ಲಿಷ್ ಮಾಡುವುದನ್ನು ಮರೆಯದಿರಿ, ಹೊಸ ಬದಲಾವಣೆ ಕಾಣಿಸಲು.
14. ಇದಲ್ಲದೇ wordpress.com, tumblr.com ಮುಂತಾದರಲ್ಲೂ ನೀವು ಖಾತೆ ತೆಗೆದು ಉಚಿತ ಬ್ಲಾಗ್ ಶುರು ಮಾಡಬಹುದು.
15. ಇಷ್ಟು ಮಾಡಿ. ಮುಂದಿನದು ಹಾಗೇ ಬರುಬರುತ್ತಾ ತಿಳಿಯುತ್ತದೆ.

ಇಲ್ಲಿಗೆ ಬ್ಲಾಗ್ ಬಗ್ಗೆ ಚರ್ಚೆ ಸಾಕು...


## ಎರಡನೆಯದಾಗಿ ಉಚಿತ ವೆಬ್ ತಾಣ/ ಜಾಲ ತಾಣ: ( Website):

ಮೊದಮೊದಲು ಎಲ್ಲರೂ ತಂತ್ರಮ್ಮ ಹೆಸರಿನ/ ಸಂಸ್ಥೆಯ ವೆಬ್ ತಾಣಗಳಿಗೆ ವಾರ್ಷಿಕವಾಗಿ ದುಡ್ಡು ಕೊಟ್ಟು ಕೊಳ್ಳಬೇಕಿತ್ತು. ಈಗೀಗ ಚಿಕ್ಕ ಮೊತ್ತಕ್ಕೂ ಕೆಲವು ಸೈಟುಗಳು ಸಿಗುತ್ತವೆ.

ಬ್ಲಾಗಿಗೂ ಸೈಟಿಗೂ ವ್ಯತ್ಯಾಸವೆಂದರೆ:-ಈ ಜಾಲತಾಣದಲ್ಲಿ ನೀವು ಏನು ಬೇಕಾದರೂ ಮಾರಬಹುದು, ಬ್ಲಾಗಿನಲ್ಲಿ ಸಾಮಾನ್ಯವಾಗಿ ಆ ಅನುಮತಿ ಇರಲ್ಲ.


ನಾವು ನಮ್ಮಹೆಸರು.ಅವರಹೆಸರು.ಕಾಂ (yourname.theirname.com) ಎಂಬ ನಿಯಮ ಒಪ್ಪಿದರೆ wix.com ನವರು ಬಹಳ ಸುಂದರ ಉಚಿತ ವೆಬ್ ಸೈಟ್ ಕಟ್ಟಿಕೊಳ್ಳಲು ಎಲ್ಲಾ ಸಾಧನಗಳನ್ನು ನಿಮಗೇ ಕೊಡುತ್ತಾರೆ.

ಆದರೆ ಇದಕ್ಕೆ ನಿಮ್ಮ ಕೈ- ಬ್ಲಾಗ್ ಇತ್ಯಾದಿ ಮಾಡಿ ಸ್ವಲ್ಪ ಪಳಗಿರಬೇಕು ಎಂಬುದು ಸುಳ್ಳಲ್ಲ.





1. ಮೊದಲಿಗೆ sign in ಮಾಡಿ ಉಚಿತ ಖಾತೆ ತೆರೆಯಿರಿ. ನಿಮ್ಮ ಪುಟ ತೆರೆದುಕೊಳ್ಳುತ್ತದೆ
2. ಇಲ್ಲಿ ಇರುವ ಸಾಧನಗಳನ್ನು ಬಳಿಸಿ ವೆಬ್ ಸೈಟ್ ಕಟ್ಟಬಹುದು.


   ನನ್ನ ಪುಟ ಹೀಗಿರುತ್ತದೆ:





3. ಅಲ್ಲಿ My sites: ಅಡಿಯಲ್ಲಿ ಹೊಸ ಸೈಟ್ (ಬಾಣ) ಆರಿಸಿಕೊಳ್ಳಿ:




4. ನಿಮಗೆ ಬೇಕಾದ ವಿಷಯಗಳ ಹಲವು ವಿನ್ಯಾಸ ಅಲ್ಲಿ ಆರಿಸ್ಕೊಳ್ಳಬಹುದು: ಕೆಳಗೆ- Business ತೆಗೆದುಕೊಂಡಿರಿ ಎನ್ನೋಣ….





5. ಅಲ್ಲಿ ಕೆಳಗೆ ತೋರಿಸಿದ ಆಯ್ಕೆ WIX ADI ತೆಗೆದುಕೊಳ್ಳಿ.ಅದೇ ಸುಲಭ!





6. ಅದರ ನಂತರ ಎಂತಾ ಕಂಪನಿ /ಸಂಸ್ಥೆ ಎಂದಾಗ ಕೆಳಗಿನ ಆಯ್ಕೆ ಮಾಡಿನೋಡಿ.

ಬೇರೆಯೂ ಇವೆ...

7.






8. ಹಾಗೇ ಮುಂದುವರೆಯಿರಿ. ಎಲ್ಲಾ ನಿಮ್ಮ ಆಯ್ಕೆ...

9. ಮುಂದೆ ನಿಮ್ಮ ವಿಳಾಸ, ಸೋಶಿಯಲ್ ಮೀಡಿಯಾ ವಿವರ ಬರೆಯಿರಿ. ನೆಕ್ಸ್ಟ್ ಅನ್ನಿ>


10. Start ಒತ್ತಿ




11. ಹಲವು ವಿನ್ಯಾಸಗಳಿವೆ. ಯಾವುದಾದರೂ ಆಯ್ದುಕೊಳ್ಳಿ:





12. ಆಗ ನಿಮಗೆ ಈ ಸ್ಕ್ರೀನ್ ಎದುರಾಗುತ್ತದೆ:





13. ಅದು ತನ್ನ ಕೆಲಸ ಮಾಡುತ್ತಿದೆ:

14.





15.





16. ಕೊನೆಗೆ publish ಬಟನ್ ಒತ್ತುವುದು ಮರೆಯದಿರಿ.

17. ಈಗ ಈ ಹೊಸ ವೆಬ್ ತಾಣದ ವಿಳಾಸ ಮೊದಲನೆಯ ಆಯ್ಕೆ:



18. ಈಗ publish  ಮಾಡಿ...visit Live site ಎಂದಾಗ ನಿಮ್ಮ ಹೊಸ ಸೈಟ್ ನೋಡಲು ಸಿದ್ಧ




19. ಇದರ ನಂತರ advanced users ಮಾತ್ರವೇ ಮುಂದುವರೆಯಲು ಸಾಧ್ಯ...ಅದನ್ನು ನೀವು ಅಲ್ಲಿನ ಹೆಲ್ಪ್/ ಟುಟೋರಿಯಲ್ಸ್ ನೋಡಿ ಕಲಿಯಲೂ ಬಹುದು.

20. ಯೂ ಟ್ಯೂಬ್ video ಸಹಾ ಇದೆ:

https://www.youtube.com/watch?v=JTdK9q_iuE0

https://www.youtube.com/watch?v=Lz6C_jQjlos

21. ನಿಮಗೆ Basics/ fundamentals  ಮಾತ್ರ ಹೇಳಿದ್ದೇನೆ.ಆದರೆ ಇನ್ನು ನೀವು ಬೇಕಾದಂತೆ ಮುಂದುವರೆಯಬಹುದು. ನಿಮ್ಮ ಇಚ್ಚೆ!

22. ನನ್ನ ಇಂತಾ ಒಂದು ಸಂಪೂರ್ಣ ವೆಬ್ ಸೈಟ್ ಈ ರೀತಿ ಇದೆ: ನೋಡಿ ಉದಾಹರಣೆಗೆ https://nageshwrites.wixsite.com/author

23.


Nagesh Kumar CS
ನಾಗೇಶ್ ಕುಮಾರ್ ಸಿಎಸ್
* Kannada author * English Novelist * Blogger
Search Site
HOME
BOOKS
BIO
CONTACT
WIX Blog
Blogger
ನಾಳೆಯನ್ನು ಗೆದ್ದವನು
ನನ್ನ ಹೊಸ ಪುಸ್ತಕಗಳು
ಬರುತ್ತಿದೆ...ಮಾರುಕಟ್ಟೆಗೆ ಉತ್ತಮಬೆಲೆಯ ನನ್ನ ನಾಲ್ಕು ಪತ್ತೇದಾರಿ ಪುಸ್ತಕಗಳು...
ಕೆ ಸತ್ಯನಾರಾಯಣ ಅವರ ಆಶೀರ್ವಾದಪೂರ್ವಕ ಬೆನ್ನುಡಿಯೊಂದಿಗೆ...
ಎರಡು ಡಬಲ್ ಕಾದಂಬರಿ
amazon.in

24.ನಮಸ್ಕಾರ!